46/15
10

129(2)

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 109 | ಶನಿವಾರ 22—12—45 | ಬಿಡಿ ಪ್ರತಿ 3 ಪೈ

ವಿವಿಧ ವರ್ತಮಾನ

'ಬ್ರಿಟನ್ನಿನ ಸಭ್ಯ ಸರಕಾರವು ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯವನ್ನು ಕೂಡಲೇ ಕೊಡುವ ಬಗ್ಗೆ ನಿಜವಾಗಿ ಇಚ್ಛಿಸುತ್ತಿರುವ ಬಗ್ಗೆ ನನಗೆ ಯಾವನೇ ಸಂಶಯವಿಲ್ಲ' ಎಂದು ದೊಂಬಾಯಿ ಪ್ರಾಂತ್ಯದ ಗೌರ್ನರಾದ ಸರ್ ಚಾರ್ಲ್ಸ್ ಲಾರು ಅಹಮದಾಬಾದಿನಲ್ಲಿ ನಡೆದ ಗುಜರಾತಿನ ಸರದಾರ ಸಭೆಯನ್ನುದ್ದೇಶಿಸಿ ಭಾಷಣಮಾಡಿದರು.

ಎಳೇ ವಯಸ್ಸಿನಲ್ಲಿಯೇ ಅಪರಾಧ ಪ್ರವೃತ್ತಿಯುಳ್ಳ ಮತ್ತು ಪಾಲಕರ ನಿಷ್ಕಾಳಜಿಯಿಂದ ಹಾದಿ ತಪ್ಪಿದ್ದ ಚಿಕ್ಕ ಮಕ್ಕಳನ್ನು ಇಡುವುದಕ್ಕಾಗಿ ಒಂದು ಗೃಹವನ್ನು ಬಾಗಲಕೋಟೆಯಲ್ಲಿ ಡೆಪ್ಯು ಇನ್ಸ್‌ಪೆಕ್ಟರ್ ಆಫ್ ಪೋಲಿಸ್ ಬೆಳ್ಳಿಂ ಇವರು ಉದ್ಘಾಟಿಸಿ ಮಾಡಿದರು.

ಪಾಲಸ್ತೈನಿನಲ್ಲಿ ಅನಿಯಮಿತವಾಗಿ ಯಹೂದ್ಯರು ಹೋಗಿ ನೆಲೆಸಲಿಕ್ಕೆ ಅನುಮತಿ ಕೊಟ್ಟ ಅದನ್ನು ಅವರ ಮಾತೃದೇಶವನ್ನಾಗಿ ಸೂಡಲು ಅಮೇರಿಕವು ನಿರ್ಧರಿಸಿದೆ.

ಫಿಲಿಪ್ಪೈನ್ ದ್ವೀಪಗಳು 1946 ರಲ್ಲಿ ಸ್ವತಂತ್ರರಾಷ್ಟ್ರವಾಗುವುದೆಂಬ ಅಧ್ಯಕ್ಷ ರೂಸ್ವೆಲ್ಟರು ಸಾರಿದ್ದ ಪ್ರಕಾರ ಆ ವಿಷಯದಲ್ಲಿ ಈವರೆಗೂ ಯಾವ ಚರ್ಚೆಯೂ ತೆಗೆದುಕೊಳ್ಳಲ್ಪಡದೇ ಇರುವದರಿಂದ ಅಲ್ಲಿ ರಾಜಕೀಯ ಅಶಾಂತಿಯು ಹೆಚ್ಚುತ್ತಲಿದೆ.

ಪ್ಯಾರಿಸ್ಸಿನಲ್ಲಿ ಸೂಳೆಗಾರಿಕೆ ಮಟ್ಟ ಹಾಕಲು ಯೋಜನೆ ಹೊರಡಿಸಿದ ಸ್ತ್ರೀ ಕೌನ್ಸಿಲರಿಗೆ ಈ ಯೋಜನೆ ತ್ಯಜಿಸಲು 1 ಮಿಲಿಯ ಫ್ರಾಂಕ್ ಗಳನ್ನು ಕೊಡ್ಮವುದಾಗಿ ತಿಳಿಸಿರುವರಂತೆ.

ಬಂಗಾಳಾ ಕ್ಷಾವದಲ್ಲಿನ ಸಾವು ಬ್ರಿಟಿಷ್ ಜಕ್ಕಾಧಿಪತ್ಯದ 6 ವರ್ಷ ಯುದ್ಧದ ಸಾವಿಗಿಂತ 5 ರಷ್ಟೆಂದು 'ಫಾರ್ ಈಸ್ಟರ್ನ್ ಸರ್ವೆ' ಪತ್ರಿಕೆ ಪ್ರಕಟಿಸಿದೆ.

ಮೈಸೂರು ಸಿಟಿ ರೇಷನಿಂಗ್ ನೋಟಿಫಿಕೇಷನ್

No. R1- 60/45-46

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ರೇಷನ್ ಡಿಪೋಗಳೂ ಮೊಹಲ್ಲಾ ಸಬ್ ಗೋಡೌನ್‌ಗಳೂ ಮತ್ತು ಇತರೇ ರೇಷನ್ ಡಿಪೋಗಳು ಸಹ ಇದೇ ಮಾಹೆ 24 ನೇ ತಾರೀಖು ಸೋಮವಾರ ಬೆಳಿಗ್ಗೆ ಮಾತ್ರ 'ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ
10—12—45 ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷತೆ

ನವದೆಹಲಿ, ಡಿ ೨೦— ಕಾಗದದ ನಿಯಂತ್ರಣ ಕಾನೂನಿನಲ್ಲಿ ರಿಯಾಯಿತಿಗಳನ್ನು ಸ್ವಲ್ಪ ಹೆಚ್ಚಿಸಲಾಗಿದೆ.

ಲಾಹೋರು, ಡಿ 20 — ಇಲ್ಲಿನ ಮುನಿಸಿಪಾಲಿಟಿಯಲ್ಲಿ ಮುಸಲ್ಮಾನೀಯರಿಗೆ ಸ್ವಲ್ಪ ಸ್ಥಾನಗಳಿರುವುದನ್ನು ಪ್ರತಿಭಟಿಸಲು ಅವರು ಜುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವರು.

ಬೆಂಗಳೂರು, ಡಿ ೨೦ — ಮುಂದಿನ ತಿಂಗಳು ಮೇ ಜೂನುಗಳಲ್ಲಿ ಕುದುರೆ ರೇಸುಗಳನ್ನು ಹನ್ನೆರಡು ದಿವಸ ನಡೆಯಲೇರ್ಪಾಡಾಗಿರುವುದಾಗಿ ತಿಳಿಯಬಂದಿರುವುದು.

ಬೊಂಬಾಯಿ ಡಿ ೨೧ — ಬೊಂಬಾಯಿನಲ್ಲಿ ಮುಂದಿನ ಮಾಹೆ ೨೬ ರಲ್ಲಿ ನಡೆಯುವ ಕರ್ನಾಟಕ ಏಕೀಕರಣ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಬೊಂಬಾಯಿ ಮಾಜಿ ಮುಹಾ ಪ್ರಧಾನ ಬಿ. ಜಿ ಖೇರ್ ಒಪ್ಪಿರುವರು. ಆ ರುಭೋತ್ಸವವನ್ನು ಸರ್ದಾರ್ ಪಟೇಲರು ನಡೆಸುವರು.

ಪೂನಾ, ಡಿ ೨೧ — ಪೂನಾದ ಹಿಯಾ ಇಮಾಮು ಇಸ್ಮೈಲಿ ಕೌನ್ಸಿಲಿನವರು ಆಗಾಖಾನರನ್ನು ಅವರ ಬೇಗಂರನು ಬರಮಾಡಿಕೊಂಡು ಸತ್ಕರಿಸಿದರು. ಆ ದಾಖಾನರು ಈ ಜನಾಂಗದ ಪುರೋಭಿವೃದ್ಧಿಗೆ ಸಹಾಯ ಮಾಡುತ್ತಿರುವುದನ್ನು ಕೊಂಡಾಡಿದರು.

□

ಬೆಂಗಳೂರು ಡಿ ೨೦ — ಮೈಸೂರು ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಸಂಸ್ಥಾನದ ಆಹಾರ ಪರಿಸ್ಥಿತಿ ವಿಷಯದಲ್ಲಿ ಟೀಕಿಸಿರುವುದನ್ನು ಕರತು ಶಾಸನ ಸಭಾ ಸದಸ್ಯ ಸಿಯ್ಯಾದ್ ಅಮ್ಜರ್ ರಹಮಾನರು ಖಂಡಿಸಿರುವುದಲ್ಲದೆ ಮೈಸೂರು ಸರ್ಕಾರವು ಯುದ್ಧಕಾಲದಲ್ಲಿ ಸಂಸ್ಥಾನ ಆಹಾರ ಪರಿಸ್ಥಿತಿಯನ್ನು ಕೆಡದಂತಿರಲು ತುಂಬಾ ಶ್ರಮವಹಿಸಿತೆಂದೂ ಆಹಾರ ಸಚಿವರಾಗಿದ್ದ ಶ್ರೀ ಶ್ರೀನಿವಾಸನ್ನರವರ ಸೇವೆಯು ಸ್ತೋತ್ರಾರ್ಹವಾದುದೆಂದೂ ಮುಂತಾಗಿ ತಿಳಿಸಿರುತ್ತಾರೆ.

ಪತ್ರಿಕೋದ್ಯೋಗಿ ಸಮ್ಮೇಳನದ — ಅಧ್ಯಕ್ಷತೆಗೆ —

20 ನೇ ತಾ || ಸಂಜೆ 5 ಘಂಟೆವರೆಗೆ ಶ್ರೀ ಎಂ. ಎಲ್. ಶ್ರೀಕಂಠಯ್ಯನವರೊಬ್ಬರ ಹೆಸರು ಮಾತ್ರ ಸ್ವಾಗತ ಸಮಿತಿಗೆ ಸೂಚಿಸಿ ಒಂದಿರುವುದೆಂದು ಹಾಸನದಿಂದ ಶ್ರೀ ಹೆಚ್. ಎಸ್. ರಾಮಕೃಷ್ಣ ಅಯ್ಯಂಗಾರ್ಯರು ತಂತೀ ವಾರ್ತೆ ಕಳುಹಿಸಿದಾರೆ.

ಲಂಡನ್, ಡಿ 20 — ಚೈನಾದಲ್ಲಿ ಅಮೇರಿಕಾ ಸೈನ್ಯವಿರುವ ವಿಷಯದಲ್ಲಿ ರಷ್ಯಾ ಪ್ರವಾಡ ಪತ್ರಿಕೆ ಖಂಡಿಸಿದೆ.

ಸಿಲ್ಹೆಟ್, ಡಿ 20 — ಇಲ್ಲಿಗೆ ಪಂಡಿತ ನೆಹರು ಬರುತ್ತಿದ್ದಾಗ ಒಬ್ಬನು ಲಕೋಟೆಯೊಂದನ್ನು ಅವರ ಕಡೆ ಎಸೆದನು. ತೆಗೆದು ನೋಡಲಾಗಿ ಅದರಲ್ಲಿ ಸುಭಾಷರ ಪಠವೂ ಮತ್ತು ಐನೂರೊಂದು ರೂಪಾಯಿಗಳಿದ್ದವು.

ಲಂಡನ್, ಡಿ 19 — ಜರ್ಮನಿಯಿಂದ ರಸಾಯನ ಶಾಸ್ತ್ರ ಅಭಿವೃದ್ಧಿಯನ್ನು ಪಡೆದು ಅದರಿಂದ ಬ್ರಿಟನ್ನಿಗೆ ಫಾಯಿದೆ ಹೊಂದೂ ಕೆಲವು ಸುಂದಿ ರಸಾಯನಿಕರನ್ನು ಬ್ರಿಟನ್ನಿಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಲಿರುವರು.

ನವದೆಹಲಿ, ಡಿ 21 — ನರೇಂದ್ರ ಮಂಡಲಿಗೆ ವಕ್ತಿ ಭೂಪಾಲ ನವಾಬರು ಚಾನ್ಸಲರಾಗಿ ಜುನಾಯಿತರಾದರು.

ಲಂಡನ್, ಡಿ 20 — ಕ್ರಿಸ್‌ಮಸ್ ನಂತರ ಮಿ || ಅಟ್ಲಿಯವರು ಡಚ್ ಪ್ರಧಾನ ಮಂತ್ರಿಯೊಡನೆ ಇಂಡೊನೇಷಿಯಾ ವಿಷಯ ಮಾತುಕತೆಗಳನ್ನು ನಡೆಸುವರು.

ಲಂಡನ್, ಡಿ 20 — ಬ್ರಿಟಿಷ್ ಹೋಟಲುಗಳಲ್ಲಿ ಭಾರತೀಯರಿಗೂ ಮತ್ತು ಆಫ್ರಿಕಾದವರಿಗೆ ಅವರು ಕರೀ ಮನುಷ್ಯರೆಂದು ಆಹಾರ ಕೊಡದಿದ್ದ ವಿಷಯವನ್ನು ಪರಿಶೀಲಿಸುವುದಾಗಿ ಕಾಮನ್ಸ್ ಸಭೆಯಲ್ಲಿ ಗೃಹ ಕಾರ್ಯದರ್ಶಿಗಳು ತಿಳಿಸಿದರು

ರಾಜಧಾನಿ

ಮೈಸೂರು, ಡಿ 22 — ನಿನ್ನೆಯ ದಿವಸ ಬೆಳಿಗ್ಗೆ ಶ್ರೀ ರಾಮಚಂದ್ರರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ನಗರಾಭಿವೃದ್ಧಿ ಸಭೆ ನಡೆಯಿತು.

ನೂರಡಿ ರಸ್ತೆಯಲ್ಲಿ ಶ್ರೀ ಅಂಡಾಪುರಂರವರ ಮನೆಯ ಪೂರ್ವ ಭಾಗದಲ್ಲಿರುವ ತ್ರಿಕೋಣಾಕಾರದ 140 ಚ. ಗಜ ಪ್ರದೇಶದಲ್ಲಿ, 40 ಚ. ಗಜವನ್ನು ಗ್ರಾಜುಯೇಟ್ಸ್ ಕೊಆಪರೇಟಿವ್ ಸೊಸೈಟಿಗೂ, 40 ಚ. ಗಜವನ್ನು ಶ್ರೀ ಜೋಸ್ಯರಿಗೂ ಮತ್ತು 60 ಚ ಗಜವನ್ನು ಅಂಗಡಿ ಮನೆಗೆ ಕಟ್ಟುವ ಸಲುವಾಗಿಕೊಡಬೇಕೆಂದು ತೀರ್ಮಾನವಾಯಿತು.

ಇಷ್ಟು ದಿವಸಗಳ ಪರ್ಯಂತ ತಮ್ಮಗಳೊಡನೆ ಸಹಕರಿಸಿದ್ದಕ್ಕಾಗಿ ಶ್ರೀ ವೆಂಕಟರಮಣಯ್ಯನವರನ್ನು ಅಧ್ಯಕ್ಷರು ಅಭಿನಂದಿಸಿದರು. ಶ್ರೀ ವೆಂಕಟರಮಣಯ್ಯನವರು ಸೂಕ್ತೋತ್ತರವಿತ್ತರು.

ಂ ಂ

ಪೌರಸಭೆಯ ಆಶ್ರಯದಲ್ಲಿ ನಿನ್ನೆ ದಿವಸ ಜಟಕ ಪ್ರದರ್ಶನವನ್ನೇರ್ಪಡಿಸಲಾಗಿತ್ತು. ನಗರದ 460 ಗಾಡಿಗಳಲ್ಲಿ ಕೇವಲ 9 ಮಾತ್ರ ಬಂದಿದ್ದವು. ಗೆದ್ದವರಿಗೆ ಬಹುಮಾನ ಕೊಡಲಾಯಿತು.

.....

ಶ್ರೀ ಪಟ್ಟವರ್ಧನರ ವೇಲಿನ ರಾಜದ್ರೋಹದ ಅಪಾದನೆಯನ್ನು ವಾಪಸು ತೆಗೆದುಕೊಂಡು ಅವರನ್ನು ಖುಲಾಸೆ ಮಾಡಲಾಯಿತೆಂದು ನಂಜನಗೂಡು ಸುದ್ದಿ ತಿಳಿಸುತ್ತದೆ.

ಂ ಂ

ರಾಮನಾಥಪುರದ ವರ್ತಕರೊಬ್ಬರ ವೇಲಿ ಸಿರ್ವೂರದ ಪಟ್ಟಣ ನಾಲ್ಕಾಣೆಗೆ ಮಾರಿದರೆಂದು ಅಪಾದಿಸಲಾಗಿದೆ (ವಿಕ)

ಂ ಂ

ತುರುವೆಕೆರೆಯ ಸೀಮೆಯೆಣ್ಣೆ ವ್ಯಾಪಾರಿಯಾದ ಶ್ರೀ ಸಣ್ಣಲಿಂಗಯ್ಯನವರು ಸೀಮೆಯೆಣ್ಣೆಯನ್ನು ಹೆಚ್ಚು ಖರೀದಿಗೆ ಮಾಡಿದ್ದಕ್ಕಾಗಿ ಲೈಸನ್ಸ್ ರದ್ದಾಗಿರುವುದಾಗಿ ತಿಳಿಯಬಂದಿದೆ. (ವಿಕ)

ಂ ಂ

ಲಂಡನ್, ಡಿ 19 — ಭಾರತಕ್ಕೆ ಬರಲಿರುವ ಬ್ರಿಟಿಷ್ ನಿಯೋಗ ಮುಂಡಳಿಯಲ್ಲಿ ಸಾರೆನ್ಸ್ಕ್ ಮತ್ತು ಪಾಟ್ರ ವಿನಹ ಯಾರಿಗೂ ಭಾರತದ ಮೇಲೆ ವಿಶ್ವಾಸವಿಲ್ಲವೆಂದು ಡೇವಿಸರ ಅಭಿಪ್ರಾಯ.

ಂ ಂ

ಬೊಂಬಾಯಿ, ಡಿ 29 — ಜಿನ್ನಾರವರಿಗೆ ಭಾರತ ಸರ್ಕಾರ ಆರು ಲಕ್ಷ ರೂ ಪಾಯಿಗಳು ಕೊಡುತ್ತಿದೆಯೆಂಬ ಸುದ್ದಿ ಸುಳ್ಳೆಂದೂ ಜಿನ್ನಾ ಹೇಳಿದ್ದಾರೆ.

ನುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

AT Opera— From 20-12-45

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ
ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

Morning Shows from 21—12—45 (Double programme)

Yanks Ahoy — The McGuerins from Brooklyn

ಹರ್ಷ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

At Ranjit

Sant Tulsi Das

ವಿಷ್ಣುಪಂತ್‌ಪಗ್ನೀಸ್, ಲೀಲಾಚಿಟ್ನಿಸ್
ವಾಸಂತಿ ಪಾತ್ರವಹಿಸಿರುವ

ಸಂತ್ ತುಳಸೀದಾಸ್

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ.
ಸತ್ಯವಾದಿ ಸೋಮವಾರದ ಸಂಚಿಕೆಗೆ
ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ.
ಅಂಚೆ ವಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಅಕ್ಕ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

— ಸೂಚನೆ —
ಚಂದ್ರಗ್ರಹಣದ ಪ್ರಯುಕ್ತ ನಿನ್ನೇ ದಿವಸ ಪತ್ರಿಕೆಯು ಪ್ರಕಟಿಸಲ್ಪಡಲಿಲ್ಲ.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ೧ ಕ್ಕೆ ಒಂದು ರೂಪಾಯಿ.

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು